ವಿಷಯವನ್ನು ವಿವರವಾಗಿ ತಿಳಿದುಕೊಂಡ ಮೇಲಂತೂ ವಿದ್ಯಾ ತಟ್ಟೆಯಲ್ಲಿ ಹಾಕಿಕೊಟ್ಟ ಅನ್ನವೂ ಶುಭಂಕರನಿಗೆ ರುಚಿಸದಾಯಿತು. ಹೇಗೋ ನಾಲ್ಕು ತುತ್ತು ಗಂಟಲಿಗಿಳಿಸಿ ಚಾನೆಲ್ ಬದಲಾಯಿಸುತ್ತ ಮೀತಾಳ ಕುರಿತ ವಾರ್ತೆಗಳನ್ನು ನೋಡುತ್ತ ಕುಳಿತ. ಆಕೆಯ ನುಚ್ಚುನೂರಾದ ಗಾಡಿ, ಆಕೆಯ ಸಹಾಯಕಿ ಹಾಗೂ ಚಾಲಕನ ಹೆಣ, ಶೋಕಿಸುತ್ತಿದ್ದ ಮನೆಯವರು ಎಲ್ಲವನ್ನೂ ನೋಡಿ ನೋಡಿ 'ವಿದ್ಯಾ ಮಹಾನ್ ಗಾಯಕಿ ಕಣೆ, ಇದೇನಾಯಿತು ಈ ಚಿಕ್ಕ ವಯಸ್ಸಿನಲ್ಲಿ' ಎಂದ ಶುಭಂಕರ್ ಅಳುವುದಷ್ಟೇ ಬಾಕಿ. ಮೀತಾ ಅವನ ಅತ್ಯಂತ ನೆಚ್ಚಿನ ಗಾಯಕಿ. ಅವಳು ಹಾಡಿದ ಎಲ್ಲ ಹಾಡುಗಳೂ ಅವನಿಗೆ ಕಂಠಪಾಠವಾಗಿದ್ದವು. ಅವಳ ಹಾಡಿನಿಂದ ಆರಂಭವಾಗುವ ಅವನ ದಿನಚರಿ ಅವಳ ಹಾಡಿನಿಂದಲೇ ಮುಗಿಯಬೇಕು ಅನ್ನುವ ಪರಿಪಾಠದಲ್ಲಿ ಸ್ನಾನದ ಸಮಯವೂ ಹೊರತಾಗಿರಲಿಲ್ಲ.

'ಅವಳ ಹಾಡುಗಳನ್ನು ಹೇಳಿಕೊಂಡು ಸ್ನಾನ ಮಾಡುವುದಕ್ಕಿಂತಲೂ ಸ್ತೋತ್ರಗಳನ್ನೋ ಇಲ್ಲವೆ ಶ್ಲೋಕಗಳನ್ನೋ ಹೇಳಿಕೊಂಡು ಸ್ನಾನ ಮಾಡಿದರೆ ಪುಣ್ಯ ಬರುತ್ತೆ' ಎಂದು ವಿದ್ಯಾ ಅವನನ್ನು ರೇಗಿಸಿದರೂ ಶುಭಂಕರನ ದಿನಚರಿ ಮಾತ್ರ ಬದಲಾಗಲಿಲ್ಲ. ವಿದ್ಯಾ ಮೊದಲ ಸಲ ಗರ್ಭಿಣಿ ಯೆಂದು ಗೊತ್ತಾದ ಮೇಲಂತೂ ಮೀತಾ ಹಾಡುತ್ತಿರುವ ಹಾಗೂ ಒಳ್ಳೆಯ ಮೂಡಿನ ಫೋಟೊ ಒಂದನ್ನು ದೊಡ್ಡದಾಗಿ ಕಟ್ಟುಹಾಕಿಸಿ ತಮ್ಮ ಕೋಣೆಯಲ್ಲಿ ಹಾಕಿದ್ದ. ಬೆಳಿಗ್ಗೆ ಎದ್ದಾಗ, ರಾತ್ರಿ ಮಲಗುವಾಗ ವಿದ್ಯಾಗೆ ಮೀತಾ ಕಾಣಬೇಕು ಅನ್ನುವಷ್ಟರ ಮಟ್ಟಿಗಿನ ಹುಚ್ಚುತನ ಅವನದು. ತನ್ನ ಒಬ್ಬಳೇ ಮಗಳಿಗೆ 'ಮಿತಾಲಿ' ಎಂದೇ ಹೆಸರಿಟ್ಟು ಅವಳನ್ನು ಮೀತಾಳಂತೆಯೇ ಪ್ರಸಿದ್ಧ ಗಾಯಕಿಯನ್ನಾಗಿ ಮಾಡಬೇಕೆನ್ನುವ ಕನಸನ್ನು ಅವನು ಹೊತ್ತಿದ್ದ.

ಭಾರತ ಸರ್ಕಾರದಡಿ ಬರುವ 'ಇನ್‌ಸ್ಟಿಟ್ಯೂಟ್ ಆಫ್ ಬಯೋಟೆಕ್ನಾಲಾಜಿ ಆಂಡ್ ಜೆನಿಟಿಕ್ ಎಂಜಿನಿಯರಿಂಗ್'ನಲ್ಲಿ ತಂತ್ರಜ್ಞನಾಗಿ ಕೆಲಸ ಮಾಡುತ್ತಿದ್ದ ಶುಭಂಕರ್ ಮದುವೆಯ ಮುಂಚೆಯೂ ದಿನವಿಡಿ ಕೆಲಸ ಮಾಡಿ, ಸಾಯಂಕಾಲ ಮೀತಾಳ ಹಾಡುಗಳನ್ನು ಕೇಳುವುನ್ನು ತನ್ನ ದಿನಚರಿಯನ್ನಾಗಿ ಮಾಡಿಕೊಂಡಿದ್ದ. ವಿದ್ಯಾ ಅವನನ್ನು ರೇಗಿಸಲು 'ಮೀತಾ ನನ್ನ ಸವತಿ' ಅನ್ನುತ್ತಿದ್ದುದರಲ್ಲಿ ಸ್ವಲವೂ ಅತಿಶಯೋಕ್ತಿಯಿರಲಿಲ್ಲ.

ಸಾತ್ವಿಕ್‌ನೊಂದಿಗೆ ಎಂಜಿನಿಯರಿಂಗ್ ಕಾಲೇಜಿನಲ್ಲಿದ್ದಾಗ ನಡೆದ ಘಟನೆ ಇವೆಲ್ಲಕ್ಕೂ ಕಳಶ ವಿದ್ದಂತೆ. ಕಲಿತಾದ ಮೇಲೆ ಇಬ್ಬರೂ ಒಂದೇ ಕಂಪೆನಿಯಲ್ಲಿ ಬೇರೆ ಬೇರೆ ಹುದ್ದೆಗಳನ್ನಲಂಕರಿಸಿದ್ದರು. ಶುಭಂಕರ್ ತಂತ್ರಜ್ಞನಾದರೆ, ಸಾತ್ವಿಕ ಸಂಶೋಧಕನಾಗಿದ್ದ. ಮದುವೆಗೆ ಮುನ್ನ ವಾಸವಾಗಿದ್ದ ಒಂದೇ ಕೋಣೆಯಲ್ಲಿ ಶುಭಂಕರ್ ತಾನು ಮಲಗುತ್ತಿದ್ದ ಮಂಚದ ಪಕ್ಕದ ಗೋಡೆಯ ಮೇಲೆ ಒಂದಿಂಚೂ ಜಾಗ ಬಿಡದಂತೆ ಅಂಟಿಸಿದ್ದ ಮೀತಾಳ ಬೇರೆ ಬೇರೆ ಭಂಗಿಗಳ ಬೇರೆ ಬೇರೆ ಮೂಡ್‌ಗಳ ಫೋಟೊಗಳನ್ನು ಒಂದು ದಿನ ಆ ಪಿಜಿಯ ಮಾಲೀಕ ಏನೋ ಕೆಲಸಕ್ಕೆಂದು ಶುಭಂಕರನ ಕೋಣೆಗೆ ಹೋದವನು ನೋಡಿ ಸಿಡಿಮಿಡಿಗೊಂಡು ನನ್ನ ಕೋಣೆಯ ಗೋಡೆಗಳನ್ನು ಹಾಳು ಮಾಡುತ್ತಿದ್ದೀರಿ ಎಂದು ಸಾತ್ವಿಕ್‌ಗೆ ಬೈದು ಹೋಗಿದ್ದ. ಆಗ ಶುಭಂಕರ್ ರೂಮಿನಲ್ಲಿರಲಿಲ್ಲ. ರಾತ್ರಿ ಊಟ ಮಾಡುವಾಗ ಆತ ಮತ್ತೆ ಮೆಸ್ಸಿಗೆ ಬಂದು ಶುಭಂಕರನಿಗೆ ಬೈದು ಗೋಡೆ ಹಾಳು ಮಾಡಿದ್ದಕ್ಕಾಗಿ ಇನ್ನೂರು ರೂಪಾಯಿ ದಂಡ ವಿಧಿಸಿದ್ದೆ ಶುಭಂಕರ್ ಕೆಂಡಾಮಂಡಲವಾಗಿದ್ದ. ಒಂದು ಪಕ್ಷ ತನಗೆ ಆದ ಅವಮಾನ ಸಹಿಸಿಯಾನು. ಆದರೆ, ತನ್ನ ಆರಾಧ್ಯ ದೇವತೆಗೆ ಆದ ಅವಮಾನ? ತಡಮಾಡದೆ ಜೇಬಿಗೆ ಕೈಹಾಕಿ ಆಗಷ್ಟೇ ಸಿಕ್ಕಿದ್ದ ತಿಂಗಳ ಸಂಬಳದಿಂದ ಎರಡು ಸಾವಿರ ತೆಗೆದು ಮಾಲೀಕನ ಕೈಯಲ್ಲಿಡುತ್ತ 'ನೀವು ಈ ಕೋಣೆಯ